ಲೇಖನ 04

# ಭುವಿಗೆ ವರ್ಷಧಾರೆ ತರುವ ಮರಬಳ್ಳಿ: ಗಣೇಶಪ್ರಿಯ ಗೋವಿಂದಪುಷ್ಪ

ಗೋವಿಂದ ನಾಮದ ಫಲವಿದು ನೋಡು, ಬೆಟ್ಟದ ಮೇಲಿನ ಅಮೃತವಿದು, ಮುಳ್ಳಿನ ನಡುವೆ ಅರಳುವ ಹೂವು ರೋಗವ ನೀಗುವ ದೈವವಿದು, ಕರೀರವೆಂಬ ಯಜ್ಞದ ಕರೆಯನು ಕೇಳಿ ವರುಣನ ಧರೆಗೆ ತರುವದು ಕವಿ ಕಮಲಾತನಯ ಗೋವಿಂದ ಫಲ ವರ್ಣಿಸಿದ ಪರಿಯಿದು. ಪ್ರಕೃತಿಯ ಮಡಿಲಿನಲ್ಲಿ ಅಡಗಿರುವ ವೈವಿಧ್ಯಮಯ ಸಸ್ಯರಾಶಿಗಳಲ್ಲಿ ಬೆಳೆದು ನಿಲ್ಲುವ ಗೋವಿಂದ ಫಲ. ಮನಸೆಳೆಯುವ ಪುಷ್ಪಗಳಿಂದ ವಿಶಿಷ್ಠ ಸೌಂದರ್ಯ ಮತ್ತು ಔಷಧಿಯ ಗುಣಗಳಿಂದ ನಾಡಿನ ಜನತೆಯ ಸೇವೆಗೆ ಒದಗುವ ಅಪರೂಪದ ಪಾದಪವಿದು. ವರಾಹಮಿಹಿರ ದೃಷ್ಟಿಯಲ್ಲಿ ಇದೊಂದು ಜಲಸೂಚಕ ಸಸ್ಯ.

ರಾಜಸ್ತಾನದ ಆಹಾರ ಮತ್ತು ಸಾಂಸ್ಕೃತಿಕ ಆಚರಣೆಯಲ್ಲಿ ಮಹತ್ವದ ಪಾತ್ರವಹಿಸುವ ಗೋವಿಂದ ಫಲ ಶತಮಾನಗಳಿಂದ ಬರಗಾಲದ ಸಮಯದ ಜೀವನಾಧಾರ ಆಹಾರದ ಮೂಲ. ತೊಟ್ಟಿಲಕಾಯಿಬಳ್ಳಿ ಎಂಬ ನಾಮವ ಹೊತ್ತ ಈ ಹಣ್ಣು ಗೋಕುಲಾಷ್ಟಮಿಯ ಬಾಲಕೃಷ್ಣನ ಪೂಜಾಫಲವಿದು. ಆಷಾಢ ದ್ವಾದಶಿಯ ವಿಠಲನ ಪೂಜಾ ಪುಷ್ಪವಾಗಿ,ನೈವೇಧ್ಯದ ಫಲವಾಗಿ ಭಕ್ತರ ಮನ ತಣಿಸುವ ಪವಿತ್ರಸಸ್ಯವಿದು. ಆಧುನಿಕ ವೈದ್ಯಕೀಯ ಜಗತ್ತಿಗಿಂತಲೂ ಮೊದಲೇ ನಮ್ಮ ಹಿರಿಯರು ಗುರುತಿಸಿದ್ದ ಒಂದು ಅಪರೂಪದ ಮೂಲಿಕೆ ಗೋವಿಂದ ಪುಷ್ಪ ಜೀವ ವೈವಿಧ್ಯದ ಒಂದು ಅಮೂಲ್ಯ ಅಂಗ.



ಚಿತ್ರ ಕೃಪೆ: :- ಉಮಾಪತಿ ಭಟ್ಟ ಕೆ ವಿ

ವರ್ಷಧಾರೆ ಭುವಿಗೆ ಕರೆಯುವ ಕರೀರ ಇಷ್ಟಿಯ ಯಜ್ಞದ ಸಮಿಧೆಯಾಗಿ, ಸಿದ್ದಿವಿನಾಯಕ ವ್ರತದ ಅರ್ಚನೆಯ ಗೋವಿಂದ ಪುಷ್ಪ.

ಕಾನನದ ಸೌಂದರ್ಯಕ್ಕೆ ಮೆರಗು ತರುವ ಆಕರ್ಷಕ ಹೂವುಗಳನ್ನು ಅರಳಿಸುವ ತೊಟ್ಟಿಲಬಳ್ಳಿಗೆ ಭಾರತ, ಶ್ರೀಲಂಕಾ,ಥೈಲ್ಯಾಂಡ್, ಚೀನಾ, ಮಾನ್ಮಾರ್ ವಿಯೆಟ್ನಾಂ ತವರೂರು. ಗೋವಿಂದ ಪುಷ್ಪದ ಕುರಿತು ಮಾಹಿತಿ ನೀಡಿದವರು. ಮಂಗಳೂರಿನ ಉದಯಕುಮಾರ ಶೆಟ್ಟಿ. ಈ ಸಸ್ಯದ ಕುಲ ಕುಟುಂಬ ಅರಿಯೋಣ. ಕ್ಯಾಪರೆಸಿಯೇ ಸಸ್ಯ ಕುಟುಂಬದ ಸದಸ್ಯ ಇದರ ವೈಜ್ಞಾನಿಕ ಹೆಸರು ಕ್ಯಾಪರಿಸ್ ಝ್ಯುಲಾನಿಕಾ. ಕನ್ನಡದಲ್ಲಿ ಗೋವಿಂದಿ, ಕಡುವಘಂಟಿ, ತೊಟ್ಟಿಲಬಳ್ಳಿ, ಗೋವಿಂದಫಲ, ಅತುಂಡಿಕಾಯಿ, ಮುಳ್ಳು ಕತ್ತರಿ, ಗುಜರಾತಿಯಲ್ಲಿ ಗೋವಿಂದಕಲ್,

ತೆಲುಗಿನಲ್ಲಿ ಆರುದೊಂಡ, ತಮಿಳು ಕಾರ್ರೊಟ್ಟಿ ಸಂಸ್ಕೃತದಲ್ಲಿ ಕರಂಭ, ತಾಪಸಪ್ರಿಯ, ವ್ಯಾಘ್ರನಖಿ, ಕರೀರ, ಕ್ರಕರ, ಗ್ರಂಥಿಲಾ, ಅಹಿಂಸ್ರಾ, ವ್ಯಾಘ್ರಪಾದ, ವ್ಯಾಘ್ರನಖಿ, ಕಂಟಕಲಾಟ, ಕಟುಕಂದರಿ,ಕಿಂಕಣಿ ಕೃಶಾಂಗಿ, ಇಂಗ್ಲಿಷನಲ್ಲಿ ಸಿಲೋನ ಕೇಪರ್, ಹಿಂದಿಯಲ್ಲಿ ಅರ್ಧಂಡ್,ಕೊಂಕಣಿಯಲ್ಲಿ ವಾಘಾಟಿ ಗೋವಿಂದ ಪುಷ್ಪದ ನಾಮಾವಳಿಗಳು.

ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಸಸ್ಯಗಳು ಆಧ್ಯಾತ್ಮದೊಂದಿಗೆ ಬೆಸೆದುಕೊಂಡಿದೆ. ಭಗವಂತನ ಆರಾಧನೆಯಲ್ಲಿ ಒಂದಿಲ್ಲೊಂದು ಸಸ್ಯಗಳ ಹೆಸರುಗಳು ತಳಕುಹಾಕಿಕೊಂಡಿದೆ. ಗೋವಿಂದನ ಸ್ಮರಣೆಗೆ ಆಷಾಡದಲ್ಲಿ ಗೋವಿಂದಫಲ ಸಮರ್ಪಣೆ ಇದು ಸನಾತನ ಸಂಸ್ಕೃತಿಯ ಭಾರತದಲ್ಲಿ ಮಾತ್ರ ನೋಡಲುಸಾಧ್ಯ. ಗೋವಿಂದ ಎಂದರೆ ಗೋವುಗಳ ಅಥವಾ ವೇದಗಳ ರಕ್ಷಕ ಎಂದರ್ಥ, ಭಗವಾನ್ ಶ್ರೀಕೃಷ್ಣನು ಕಾಡಿನಲ್ಲಿ ಗೋವುಗಳನ್ನು ಮೇಯಿಸುವಾಗ ಈ ಕಾಡುಹಣ್ಣುಗಳು ಅವನಿಗೆ ಆಹಾರವಾಗಿದ್ದವು. ಆದ್ದರಿಂದ ಇದಕ್ಕೆ ಸಮುದ್ರಮಥನದ ಕಾಲದಲ್ಲಿ ಭೂಮಿಯ ಮೇಲೆಬಿದ್ದ ಅಮೃತದ ಹನಿಯಿಂದ ಈ ಸಸ್ಯ ಹುಟ್ಟಿದೆಯೆಂಬುದು ಜನಪದರ ನಂಬಿಕೆ.

ಗೋವಿಂದ ಫಲವು ಮುಖ್ಯವಾಗಿ ಆರೋಗ್ಯ ರಕ್ಷಣೆ ಮತ್ತು ಪ್ರಕೃತಿ ಆರಾಧನೆ ಪ್ರತೀಕವಾಗಿದೆ ಗೋವಿಂದ ಪುಷ್ಪ ಧಾರ್ಮಿಕ ಸಾಂಸ್ಕೃತಿಕ ಆಚರಣೆಗಳಲ್ಲಿ ಬಳಕೆಯಾಗುತ್ತದೆ. ಭಾದ್ರಪದ ಶುದ್ಧ ಚೌತಿಯಂದು ಆಚರಿಸುವ ಸಿದ್ದಿವಿನಾಯಕ ವೃತದಲ್ಲಿ ಓಂ ವಟವೇ ನಮ: ಗೋವಿಂದ ಪುಷ್ಪಂ ಸಮರ್ಪಯಾಮಿ ಎಂದು ಭಕ್ತಿಪೂರ್ವಕವಾಗಿ ಗಣೇಶನಿಗೆ ಅರ್ಪಿಸುವರು. ಧನ್ವಂತರಿ ಪೂಜೆಯಲ್ಲೂ ಗೋವಿಂದ ಪುಷ್ಪದಿಂದ ಅರ್ಚನೆ ಗೋವಿಂದ ಫಲ ಎಂಬ ಹೆಸರು ಬಂದಿದೆ ಹಾಗೂ ಮಾಡುವಂತೆ ಧಾರ್ಮಿಕ ಗ್ರಂಥಗಳು ತಿಳಿಸುತ್ತವೆ.

ಕರ್ನಾಟಕ ಮಹಾರಾಷ್ಟ್ರದ ಗ್ರಾಮೀಣ ಹಲವು ಭಾಗಗಳಲ್ಲಿ ಆಷಾಢ ಏಕಾದಶಿಯಂದು ಪಾರಣೆಮಾಡಿ ಮರುದಿನ ದ್ವಾದಶಿಯಂದು ವಿಶೇಷ ಪೂಜೆಗಳಲ್ಲಿ ಹೂವನ್ನು ಮತ್ತು ನೈವೇಧ್ಯದಲ್ಲಿ ಹಣ್ಣುಗಳನ್ನು ಬಳಸುವದು ಶ್ರೇಷ್ಠವೆಂದು ಮತ್ತು ಅಂದು ಗೋವಿಂದನ ಸ್ಮರಣೆ ಮಾಡುತ್ತಾ ಹಣ್ಣುಗಳನ್ನು ಸೇವಿಸಿದರೆ ವರ್ಷವಿಡೀ ಯಾವುದೇ ವಿಷಕಾರಿ ಜಂತುಗಳ ಬಾಧೆ, ರೋಗಗಳು ಬರುವದಿಲ್ಲ ಎಂಬ ನಂಬಿಕೆಯಿದೆ. ಶ್ರೀಲಂಕಾದಲ್ಲೂ ಕೂಡಾ ಆಷಾಢ ಅಮಾವಾಸ್ಯೆಯಂದು ಪೂಜೆಗಳಲ್ಲಿ ಇದರ ಎಲೆ ಹಾಗೂ ಹೂವುಗಳನ್ನು ಅರ್ಚನೆಯಲ್ಲಿ ಬಳಸಲಾಗುತ್ತದೆ. ಕಾರೀರ ಇಷ್ಟಿ ಎಂಬುದು ಮಳೆಗಾಗಿ ಪ್ರಾರ್ಥಿಸಿ ಮಾಡಲಾಗುವ ವಿಶಿಷ್ಟವಾದ ಯಜ್ಞವಾಗಿದೆ. ಗೋವಿಂದ ಫಲ ಕರೀರ ಎಂಬ ಹೆಸರುಂಟು ಇದರ ಹಣ್ಣುಗಳನ್ನು ಮತ್ತು ಎಲೆ ಚಿಗುರನ್ನು ಪುಡಿಮಾಡಿದ ಹಿಟ್ಟನ್ನು ಜೇನುತುಪ್ಪದೊಂದಿಗೆ ಮಿಶ್ರಣದೊಂದಿಗೆ ಉಂಡೆ ಮಾಡುವರು. ಇದಕ್ಕೆ ಕಾರೀರ ಪಿಂಡಿ ಎನ್ನುವರು ಇದನ್ನು ಕಾರೀರ ಇಷ್ಟಿಯ ಯಜ್ಞದಲ್ಲಿ ಮರುತ್ ದೇವತೆಯನ್ನು ಸ್ಮರಿಸಿ ವೇದಮಂತ್ರದೊಂದಿಗೆ ಅಗ್ನಿಗೆ ಅರ್ಪಿಸುವರೆಂದು ನೈಷಧ ಚರಿತ ಮತ್ತು ಸಾಯಣರ ತೈತ್ತರೀಯ ಸಂಹಿತೆಯ ಭಾಷ್ಯದಲ್ಲಿ ಉಲ್ಲೇಖಿಸಿದೆಯೆಂದು ಮಾಹಿತಿ ತಿಳಿಸುತ್ತದೆ. ಬೀದರ ಜಿಲ್ಲೆಯಲ್ಲಿ ಮಹಾಶಿವರಾತ್ರಿದಿನ ಇಷ್ಟಲಿಂಗ ಪೂಜೆಯಲ್ಲಿ ಪುಷ್ಪಗಳನ್ನು ಮತ್ತು ಹೋಮಕ್ಕೆ ಗಿಡದ ಕಾಂಡವನ್ನು ಬಳಸುತ್ತಿರೆಂಬ ಮಾಹಿತಿಯಿದೆ.

ಬುಡಕಟ್ಟು ಜನಾಂಗದವರು ದುಷ್ಟಶಕ್ತಿಯನ್ನು ಹೋಗಲಾಡಿಸಲು, ಮಕ್ಕಳಿಗೆ ದೃಷ್ಟಿದೋಷ ನಿವಾರಣೆಗೆ ಈ ಸಸ್ಯವನು ಮಾಂತ್ರಿಕ ಸಸ್ಯವೆಂದು ಪರಿಗಣಿಸುವರೆಂದು ಹೇಳಲಾಗುತ್ತದೆ. ರಾಜಸ್ತಾನದ ಮರುಭೂಮಿ ಪ್ರದೇಶದ ಜನರ ಅಭಾಜ್ಯ ಅಂಗವಾಗಿದೆ. ಅಲ್ಲಿನ ಜನಪ್ರಿಯ ಖಾದ್ಯ ಕೇರ್ ಸಾಂಗ್ರಿ ತಯಾರಿಕೆಯಲ್ಲಿ ಹಣ್ಣು ಪ್ರಮುಖ ಪದಾರ್ಥವಾಗಿದೆ.

ಶೀತಲಾ ಅಷ್ಟಮಿ ಹಬ್ಬದಲ್ಲಿ ಸೇವಿಸುವ ತಂಡಾ ಆಹಾರದಲ್ಲಿ ಗೋವಿಂದ ಫಲವನ್ನು ಸೇರಿಸುತ್ತಾರೆ. ತರಕಾರಿಯಂತೆ, ಉಪ್ಪಿನಕಾಯಿ ತಯಾರಿಕೆಯಲ್ಲೂ ಬಳಕೆಯಿದೆ. ಆಯುರ್ವೇದದಲ್ಲಿ ಇದನ್ನು ರಸಾಯನ ಮೂಲಿಕೆಯೆಂದು ಪರಿಗಣಿಸಲಾಗಿದೆ. ನಡೆದಾಡುವ ಸಸ್ಯಕೋಶ ಎಂದೇ ಕರೆಯಲ್ಪಡುವ ಡಾ. ಸತ್ಯನಾರಾಯಣ ಭಟ್ ಅವರು ನೀಡಿದ ಮಾಹಿತಿಯಂತೆ ಇದನ್ನು ಟೋರ್ಟಿಲ್ಲಾ ಹಣ್ಣುಗಳು ಎಂದು ಕರೆಯುತ್ತಾರೆ. ಬಾಲಕೃಷ್ಣನಿಗೆ ಈ ಹಣ್ಣುಗಳು ತುಂಬಾ ಇಷ್ಟವಾದವು. ಗೋಕುಲ ಅಷ್ಟಮಿಯ ಕೃಷ್ಣನ ಪೂಜೆಯ ಸಮಯದಲ್ಲಿ ಬಳಸುವ ಹಣ್ಣುಗಳಲ್ಲಿ ಒಂದಾಗಿತ್ತು. ಬೆಂಗಳೂರು ವಿದ್ಯಾಪೀಠ ಪ್ರದೇಶದಲ್ಲಿ ಕತ್ತರಿಗುಪ್ಪೆ ಎಂಬ ಹೆಸರು ಕ್ಯಾಪರಿಸ್ ಜಾತಿಗಳ ಸಮೃದ್ಧಿಯಿಂದ ಬಂದಿದೆ. ನಮ್ಮ ರಾಜ್ಯದ ಪೂರ್ವ ಬಯಲು ಸಸ್ಯ ಪ್ರದೇಶದ ಪೊದೆಗಳ ಕಾಡಿನ ಸಾಮಾನ್ಯ ವರ್ಗಗಳಲ್ಲಿ ಇದು ಒಂದು. ಮೈಸೂರಿನ ಹೊರವಲಯದಲ್ಲಿರುವ ಯಲಿವಾಲ ಅರಣ್ಯ ತರಬೇತಿ ಸಂಸ್ಥೆಯ ಮೀಸಲು ಪ್ರದೇಶದಲ್ಲಿ ಈ ಸಸ್ಯವನ್ನು ಕಾಣಬಹುದು. ವರಾಹಮಿಹಿರರ ಜಲ ಸಂಶೋಧನೆಯಲ್ಲಿ ಅನೇಕ ಸಸ್ಯಗಳ ಮಾಹಿತಿ ನೀಡಿದ್ದಾರೆ. ಅವುಗಳಲ್ಲಿ ಕರೀರವೂ ಒಂದು. ದಕಾರ್ಗಲ ಅಧ್ಯಾಯದಲ್ಲಿ ಮಾಹಿತಿ "ಉತ್ತರತಶ್ಚ ಕರೀರಾದಹಿನಿಲಯೇ ದಕ್ಷಿಣೇ ಜಲಂ ಸ್ವಾದು/ ದಶಭಿ: ಪುರುಷೋರ್ಜ್ಞೆಯಂ ಪುರುಷೇ ಪೀತೋತ್ರ ಮಂಡೂಕ:" ಕರೀರ ಗಿಡದ ಉತ್ತರಕ್ಕೆ ಹುತ್ತವಿದ್ದರೆ ಅಲ್ಲಿಂದ ದಕ್ಷಿಣಕ್ಕೆ 10 ಪುರುಷ(60 ಅಡಿ) ಆಳದಲ್ಲಿ ಸಿಹಿ ನೀರಿರುವದರ ಸೂಚನೆ. 6 ಅಡಿ ಆಳದಲ್ಲಿ ಕಾಣುವ ಹಳದಿ ಕಪ್ಪೆ ಇಲ್ಲಿನ ಲಕ್ಷಣ. " ಸಕರೀರಾ ಚೇಳೂದರಿ ತ್ರಿಭಿ: ಕರ್ರೈ ಪಶ್ಚಿಮೇನ ತತ್ರಾಂಭ:/ ಅಷ್ಟಾದಶಭಿ: ಪುರುಷೋರೈಶಾನೀ ಬಹುಜಲಾ ಚ ಶಿರಾ" ಕರೀರ ವೃಕ್ಷದೊಂದಿಗೆ ಕೂಡಿಕೊಂಡು ಬೆಳೆದ ಬದರಿ(ಬಾರೇ) ವೃಕ್ಷವಿದ್ದಲ್ಲಿ 3 ಹಸ್ತ( 4.5 ಅಡಿ) ಪಶ್ಚಿಮಕ್ಕೆ 108 ಅಡಿ ಆಳದಲ್ಲಿ ಈಶಾನ್ಯ ದಿಕ್ಕಿನ ಕಡೆಗೆ ಹರಿಯುವ ಸಮೃದ್ಧವಾದ ನೀರಿನ ಸೆಲೆಯಿರುತ್ತದೆ. ಕಕುಭಕರೀರಾ ವೇಕತ್ರ ಸಂಯುತೌ ಯತ್ರ ಕಕುಭ ಬಿಲ್ವೆವಾ/ಹಸ್ತದ್ವಯೇಂಬು ಪಶ್ಚಾನ್ನರೈರ್ಭರ್ವೇತ್ಪಂಚವಿಂಶತ್ಯಾ//" ಅರ್ಜುನ ಮತ್ತು ಕರೀರಾ ವೃಕ್ಷಗಳು ಒಂದಾಗಿ ಬೆಳೆದಲ್ಲಿ ಮೂರು ಅಡಿ ಪಶ್ಚಿಮಕ್ಕೆ 150 ಅಡಿ ಆಳದಲಿ ನೀರಿರುತ್ತದೆ.

ಕರೀರ ಗಿಡವು ಟ್ಯಾನಿನ್ ಗಳು, ಫ್ಲೇವನಾಯ್ಡ್ ಗಳು, ಅಲ್ಕಲಾಯ್ಡ್, ಸಪೋನಿನ್ ಎಂಬ ರಾಸಾಯನಿಕ ಘಟಕಗಳನ್ನು ಹೊಂದಿದೆ. ಜ್ವರ ನಿವಾರಕ, ಉರಿಯೂತ ನಿವಾರಕ, ನೋವು ನಿವಾರಕ, ಕಫ ಮತ್ತು ವಾತ ದೋಷವನ್ನು ಶಮನ ಮಾಡುತ್ತದೆ. ಕೆಮ್ಮು, ಮಧುಮೇಹ, ಭೇದಿ, ಉದರ ಶೂಲೆಗಳಿಗೆ ಔಷಧವಾಗಿದೆ. ಬೇರು ಮತ್ತು ಎಲೆ ಔಷಧಿಯ ಭಾಗಗಳಾಗಿದೆ. ವಾತರೋಗಗಳಿಗೆ ಬಲಾ ತೈಲ, ಪಂಚಕರ್ಮದಲ್ಲಿ ಬಳಸುವ ಸರ್ವಮಯಾಂತಕ ಘೃತಂ ಕರೀರಾಯುಕ್ತ ಆಯುರ್ವೇದಿಯ ಔಷಧಗಳು.

ಒಂಟೆಗೆ ಪ್ರಿಯವಾದ ಮರುಭೂಮಿಯ ಪೊದೆ ಸಸ್ಯದ ಕುರಿತು ಮಹಾಭಾರತ, ಶೋದಲನಿಘಂಟು, ಸುಶ್ರುತ ಸಂಹಿತೆಯಲ್ಲಿ, ಹಳೇಗನ್ನಡದ ಸಾಹಿತ್ಯದಲ್ಲಿ ಮಾಹಿತಿಯಿದೆ. ವ್ಯಾಘ್ರನಖಿ, ವ್ಯಾಘ್ರಪಾದ ಎಂದು ಕರೆಯಲ್ಪಡುವ ಇದೊಂದು ಕೇವಲ ಕಾಡುಗಿಡವಲ್ಲ: ಪ್ರಕೃತಿಯ ಮಡಿಲಲ್ಲಿ ಅಡಗಿರುವ ಸಂಜೀವಿನಿ. ಸಸ್ಯಕ್ಕೆ ಗೋವಿಂದ ಫಲವೆಂದು ನಾಮಕರಣ ಮಾಡುವ ಮೂಲಕ ಈ ಸಸ್ಯಕ್ಕೆ ದೈವಿಕ ಪಾವಿತ್ರ್ಯತೆಯನ್ನು ತುಂಬಿದ್ದಾರೆ. ಈ ದಿವ್ಯ ಸಸ್ಯವನ್ನು ಉಳಿಸಿ ಬೆಳೆಸುವ ಮೂಲಕ ಪ್ರಕೃತಿಯ ಅಮೂಲ್ಯ ಕೊಡುಗೆಯನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸೋಣ.

::::::::::::::::::::::::::::::::::::::::::::::::::::::

**ಉಮಾಪತಿ ಭಟ್ಟ ಕೆ ವಿ**
**ಅಧ್ಯಕ್ಷರು ಮತ್ತು ಪರಿಸರ ಕಾರ್ಯಕರ್ತರು**
**ಸಮಗ್ರ ವಿಕಾಸ ಟ್ರಸ್ಟ್, ಶಿರಸಿ**